# ಬೇವಿನೂರ ಶಾಸನೋಕ್ತ 'ಕ್ಷಿತಿರುಹ ನೋಂಪಿ'

**ಡಾ.ಮಹಾದೇವಿ ಆರ್. ಹಿರೇಮಠ**
ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.

ದಾನ ದತ್ತಿ ತ್ಯಾಗ ಬಲಿದಾನ ಪುಣ್ಯ ಪರೋಪಕಾರಗಳೇ ಅಂತಃಸತ್ವವಾದ ನಮ್ಮ ಸಂಸ್ಕೃತಿಯಲ್ಲಿ ಪರಹಿತಕ್ಕಾಗಿ ಕೆರೆ ಕಟ್ಟೆ ದೇವಾಲಯಗಳನ್ನು ಅನ್ನಛತ್ರ, ಅರವಟ್ಟಿಗೆಗಳನ್ನು ನಿರ್ಮಾಣ ಮಾಡುವುದು ಹಾಗೂ ಅವುಗಳ ಹೆಸರಿನಲ್ಲಿ ದಾನ ಧರ್ಮ ದತ್ತಿಕಾರ್ಯಗಳನ್ನು ನಮ್ಮ ಪೂರ್ವಜರು ಮಾಡಿರುವುದಕ್ಕೆ ಅನೇಕ ದಾಖಲೆಗಳು ಕಾವ್ಯ ಶಾಸನಗಳಲ್ಲಿ ದೊರೆಯುತ್ತವೆ. ನಿಜ ಹೇಳಬೇಕೆಂದರೆ ಕರ್ನಾಟಕದಲ್ಲಿ ಇದುವರೆಗೆ ದೊರೆತಿರುವ ಕನ್ನಡ ಶಾಸನಗಳನ್ನು ಗಮನಿಸಿದರೆ ಹೆಚ್ಚಿನ ಸಂಖ್ಯೆಯ ಶಾಸನಗಳು ದಾನ ಶಾಸನಗಳೇ ಆಗಿವೆ. ಇದು ಒಂದೆಡೆಯಾದರೆ ಇನ್ನೊಂದೆಡೆ ಲೋಕ ಕಲ್ಯಾಣಕ್ಕಾಗಿ ಅನೇಕ ಜನರು ನಿಷ್ಠೆಯಿಂದ ಜಪ ತಪ ಅನುಷ್ಠಾಧಿಗಳನ್ನು ವ್ರತ ನೋಂಪಿಗಳನ್ನು ಆಚರಿಸಿರುವುದೂ ಕೂಡ ನಮ್ಮ ಪೂರ್ವಜರ ಆದರ್ಶ ಬದುಕಿನ ಜೀವನ ಮಾದರಿಯೇ ಆಗಿದೆ. ಕೆಲವರು ತಮ್ಮ ವೈಯಕ್ತಿಕ ಬದುಕಿನಲ್ಲಿ ಇಷ್ಟಾರ್ಥ ಸಿದ್ಧಿಗಾಗಿ ಆತ್ಮಶುದ್ಧಿಗಾಗಿ ವ್ರತಚರಣೆಗಳನ್ನು ನೋಂಪಿಗಳನ್ನು ಕೈಕೊಂಡರೆ ಕೆಲವರು ಸಮಾಜದ ಹಿತಕ್ಕಾಗಿ ನೋಂಪಿಗಳನ್ನು ಕೈಗೊಂಡದ್ದಕ್ಕಾಗಿ ಕಾವ್ಯ ಶಾಸನಗಳಲ್ಲಿ ಹೇರಳವಾದ ದಾಖಲೆಗಳು ಸಿಗುತ್ತವೆ.

"ನೋಂಪಿ' ಎಂಬುದು ಕನ್ನಡ ಪದ. ಇದು 'ನೋನ್' ಧಾತುವಿನಿಂದ ನಿಷ್ಪನ್ನವಾಗಿದ್ದು ವ್ರತವನ್ನು ಕೈಗೊಳ್ಳುವುದು ನಿಯಮ ಪಾಲಿಸುವುದು ಧಾರ್ಮಿಕ ಕಟ್ಟಳೆಗಳನ್ನು ವಿಧಿಪೂರ್ವಕವಾಗಿ ಆಚರಿಸುವುದು ಎಂಬ ಅರ್ಥವನ್ನು ಒಳಗೊಂಡಿದೆ. 'ವ್ರತ' ಎಂಬ ಸಂಸ್ಕೃತ ಪದಕ್ಕೆ ಸಂವಾದಿಯಾಗಿ ಇದು ಬಂದಿದೆ."[1] ಎಂಬುದು ವಿದ್ವಾಂಸರ ಅಭಿಪ್ರಾಯ. ಮುಮುಕ್ಷು ಜೀವನವನ್ನು ರೂಪಿಸಿಕೊಳ್ಳಲು ಅನುಕೂಲವಾಗುವ ಕಾಲಗಳೇ ಪರ್ವಕಾಲಗಳು. ಆಗ ಆಚರಿಸುವ ವ್ರತಾಚಾರಗಳೇ ನೋಂಪಿಗಳು. ನೋಂಪಿಗಳನ್ನು ಆಚರಿಸುವ ದಿನಗಳನ್ನು ಪರ್ವಗಳೆನ್ನುತ್ತಾರೆ. "ಜಿನಯತಿಗಳಾದ ಗುಣಭದ್ರಾಚಾರ್ಯರು ಮಾನವ ಶರೀರವನ್ನು 'ಇಕ್ಷು' ಎಂದರೆ ಕಬ್ಬಿನ ಜಲ್ಲೆಗೆ ಹೋಲಿಸಿದ್ದಾರೆ. ಕಬ್ಬಿನ ಜಲ್ಲೆಯಲ್ಲಿರುವ ಗಂಟುಗಳಿಗೆ 'ಪರ್ವ'ಎನ್ನುತ್ತಾರೆ. ಆ ಪರ್ವಗಳಲ್ಲಿ ಕ್ರಿಮಿಗಳು ಉಂಟಾದರೆ ಕಬ್ಬು ಪುಷ್ಟವಾಗಿ ಬೆಳೆಯದೆ ರಸಹೀನವಾಗುತ್ತದೆ ಅದರಂತೆಯೇ ಮಾನವ ಜೀವನವೂ ಸಹ. ಅಲ್ಲಿ ದುರ್ನಡೆ, ದುರ್ಭಾವನೆಗಳು ಆವರಿಸಿದರೆ ಜೀವನ ನೀರಸವೂ ವ್ಯರ್ಥವೂ ಆಗುತ್ತದೆ. ಸನ್ನಡತೆ, ಸದ್ಭಾವನೆಗಳಿಂದ ಜೀವನ ಪುಷ್ಟಗೊಂಡು ಸುಖದ ಸಂಪುಟವಾಗಲು ಪರ್ವಗಳನ್ನು ಪರ್ವಗಳಲ್ಲಿ ತಿಳಿಸಿರುವ ವ್ರತಗಳನ್ನು ಆಚರಿಸಿ ಆತ್ಮ ಶುದ್ಧಿಯನ್ನು ಮಾಡಿಕೊಳ್ಳಬೇಕು. ಈ ರೀತಿಯ ವ್ರತಗಳನ್ನು ಹಿಡಿದು ಧರ್ಮಾಚರಣೆಯಲ್ಲಿ ತೊಡಗುವುದು ಜೈನ ಧರ್ಮದಲ್ಲಿ ಅಷ್ಟೇ ಅಲ್ಲದೆ ಇತರ ಧರ್ಮಿಯರಲ್ಲಿಯೂ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ."[2]

ಜೈನ ಧರ್ಮದಲ್ಲಿ 'ಯತಿ' ಧರ್ಮ 'ಗೃಹಸ್ಥ ಧರ್ಮ' ಎಂಬುದಾಗಿ ಎರಡು ವಿಧ. ಯತಿಧರ್ಮದಲ್ಲಿ 10 ತೆರನಾಗಿವೆ. ಅದನ್ನು ದಶಧರ್ಮ ಎಂತಲೂ ಕರೆಯುತ್ತಾರೆ. ಗೃಹಸ್ಥ ಧರ್ಮ ನಾಲ್ಕು ತೆರನಾಗಿದ್ದು ಗೃಹಸ್ಥರು ವಾಸ್ತವಿಕವಾಗಿ ದಾನ, ಪೂಜೆ, ಶೀಲ, ಉಪವಾಸ ಎಂಬ ನಾಲ್ಕು ರೀತಿಯಿಂದ ನಡೆಯಬೇಕು. ಆದರೆ ಗೃಹಸ್ಥರು ಪುಷ್ಕಲ ಕರ್ಮಾದಿಗಳ ಬಂಧನದಲ್ಲಿ ಸಿಕ್ಕು ತಮ್ಮ ಅನಂತ ಜ್ಞಾನಾದಿಗಳನ್ನು ಕಳೆದುಕೊಂಡು ಮಿಥ್ಯವಾದಿಗಳಾಗಿ ಸುಳ್ಳನ್ನೇ ಸತ್ಯವೆಂದು ಭ್ರಮಿಸುತ್ತ ಆತ್ಮಘಾತುಕ ಕಾರ್ಯಗಳನ್ನೇ ಮಾಡುತ್ತಾ ಹುಟ್ಟು ಸಾವಿನ ಚಕ್ರದಲ್ಲಿ ಚತುರ್ಗತಿಗಳೊಳಗೆ ತಿರುಗುತ್ತ ಸಾಗಿರುತ್ತಾರೆ. ಹೀಗಾಗಿ ಅವರು ತಮ್ಮ ಆತ್ಮಿಕ ಸ್ವಾಭಾವಿಕ ಸ್ವರೂಪವೇನೆಂಬುದನ್ನು ಹಾಗೂ ಅದನ್ನು ಪಡೆಯಲು ಈ ಬಂಧನದಿಂದ ಪಾರಾಗುವ ಬಗೆ ಹೇಗೆ ಎಂಬುದನ್ನು ತಿಳಿಯದಷ್ಟು ಅಜ್ಞಾನಿಗಳಾಗಿರುತ್ತಾರೆ. ಇಂಥ ಅಜ್ಞಾನಿ ಆತ್ಮಗಳ(ಮಾನವರ) ಮೇಲೆ ಕರುಣೆ ತೋರಿ ಕಾಲಕಾಲಕ್ಕೆ ಬಂದ ಆಚಾರ್ಯರು, ಭಟ್ಟಾರರು ಧರ್ಮೋಪದೇಶ ಮಾಡುತ್ತಾ ಬದ್ಧಾತ್ಮರಾದ ಆತ್ಮರು ಶುದ್ಧಾತ್ಮರಾಗುವ ಬಗೆ ಹೇಗೆ ಎಂಬುದನ್ನು ಬೋಧಿಸುತ್ತ ಬಂದಿದ್ದಾರೆ. ಹೀಗೆ ಬೋಧಿಸುವಲ್ಲಿ ಆಚಾರ್ಯರು ಶ್ರಾವಕರಿಗೆ ಅಣುವ್ರತ, ಶಿಕ್ಷಾವ್ರತ, ಗುಣವ್ರತ, ಚತುರ್ದಶ ಗುಣಸ್ಥಾನ ಮೊದಲಾದ ವ್ರತಗಳನ್ನು ಹಾಕಿ ಕೊಟ್ಟಿದ್ದಾರೆ. ಇವುಗಳೊಂದಿಗೆ ಗೃಹಸ್ಥನಾದವನು ತನ್ನ ಜೀವನವನ್ನು ಸದಾ ಸದಾಚಾರ ಸನ್ಮಾರ್ಗದಲ್ಲಿಟ್ಟುಕೊಂಡು ಶಿಸ್ತಿನ

ಮಾರ್ಗದಲ್ಲಿ ಸಾಗುತ್ತಾ 4 ಬಗೆಯ ದಾನಗಳನ್ನು ಗೃಹಸ್ಥರಿಗೂ ಯತಿಗಳಿಗೂ ಮಾಡುವಂತೆ ಕೆಲವು ನಿಯಮಗಳೊಂದಿಗೆ ಹಲವಾರು ವ್ರತಗಳನ್ನು ಹೇಳಿದ್ದಾರೆ. ಈ ವ್ರತಗಳನ್ನು ಹಬ್ಬ ಹುಣ್ಣಿಮೆಗಳ ಹೆಸರಿನಲ್ಲಿ ಪ್ರಸಿದ್ಧಿಯನ್ನು ಕಲ್ಪಿಸಿ ಜೊತೆಗೆ ಸಾಧ್ಯವಿದ್ದಷ್ಟು ಪ್ರತಿದಿನ ಯಾವುದೋ ಒಂದು ವ್ರತದಲ್ಲಿ ಶ್ರಾವಕನು ನಿಬದ್ಧವಾಗಿರಲಿ ಎಂಬ ಉದ್ದೇಶದಿಂದ ಆಚಾರ್ಯರು ಕಲ್ಪಿಸಿದ 300ಕ್ಕೂ ಹೆಚ್ಚು ವ್ರತಗಳು ಕಾವ್ಯ ಶಾಸನಗಳಲ್ಲಿ ಕಂಡು ಬರುತ್ತವೆ. ಜೈನ ಧರ್ಮದ ಪ್ರಕಾರ ಸ್ತ್ರೀಯಾದವಳು ಮೊದಲ ಸಲ ಋತುಮತಿಯಾದಾಗ ಕುಂಕುಮ ನೋಂಪಿಯನ್ನು ಕೈಗೊಳ್ಳುವಳು. ಅದರಿಂದ ಅವಳು ಮುಂದೆ ಉಳಿದ ಎಲ್ಲಾ ನೋಂಪಿಗಳನ್ನು ಆಚರಿಸಲು ಪಾತ್ರಳಾಗುವಳು. ಅಂದರೆ ಮುಂದೆ ತನ್ನ ಬದುಕಿನಲ್ಲಿ ಎಲ್ಲ ನೋಂಪಿಗಳನ್ನು ಆಚರಿಸಲು ಅರ್ಹಳಾಗುವಳು ಎಂದರ್ಥ. ಆದರೆ ಪುರುಷನಿಗೆ ಈ ರೀತಿಯ ಯಾವುದೇ ನಿರ್ಬಂಧವಿಲ್ಲ. ಇಲ್ಲಿ ಭಾವಪೂಜೆಗಿಂತ ದ್ರವ್ಯ ಪೂಜೆಗೆ ಹೆಚ್ಚು ಪ್ರಾಶಸ್ತ್ಯವಿದೆ.

ನೋಂಪಿಯ ಪಾಲನೆ ಸಾಮಾನ್ಯವಾಗಿ ಮಂಡಲಗಳಂತೆ ಬೆಸ ಸಂಖ್ಯೆಯಲ್ಲಿ ಇದ್ದು ಸಣ್ಣ ನೋಂಪಿಗಳು ಸಾಮಾನ್ಯವಾಗಿ ಮೂರು ದಿನ ನಡೆಯುತ್ತವೆ. ಕೆಲವು ಬಹುವಾಗಿ ಒಂದೇ ದಿನದ ನೋಂಪಿಗಳು. ದಂಪತಿಗಳು ಜೊತೆಯಾಗಿ ನೋಂಪಿ ಆಚರಿಸುವುದು ಉತ್ತಮವೆಂಬ ನಂಬಿಕೆ ಇದ್ದರೂ ಅವಿವಾಹಿತರೂ ಪಾಲಿಸಲು ಅಭ್ಯಂತರವಿಲ್ಲ ತಂದೆಯಿಂದ ಮಗನಿಗೆ ತಾಯಿಯಿಂದ ಮಗಳಿಗೆ ಹೇಳಲ್ಪಟ್ಟು ಆಚರಿಸುವುದು ಉಂಟು. ನೋಂಪಿಯನ್ನು ಪಾಲಿಸುವ ದಿನ ಬಿಸಿನೀರು ಮಂಡೆಗೆ ಹಾಲು ಸಕ್ಕರೆ ತೆಗೆದುಕೊಳ್ಳಬಹುದೇ ಹೊರತು ಉಪ್ಪು ಉಳಿ ಕಾರ ಸೇವಿಸುವಂತಿಲ್ಲ. ಸಾಮಾನ್ಯವಾಗಿ ನೋಂಪಿಗಳನ್ನು ಬಸದಿಯಲ್ಲಿ ಆಚರಿಸಲಾಗುತ್ತದೆ ಮೊದಲು ನೋಂಪಿಗಳು ಕೇವಲ ಪ್ರತಪೂಜೆಗಳ ರೂಪದಲ್ಲಿ ಮಾತ್ರ ಇದ್ದು ನಂತರ ವ್ರತಗಳನ್ನು ಆಚರಿಸಿ ಫಲ ಸಮೃದ್ಧಿಯನ್ನು ಪಡೆದವರ ಕಥೆಗಳನ್ನು ಒಳಗೊಂಡಿತು. ಹೀಗಾಗಿ ಜೈನರು ಈ ವ್ರತಗಳನ್ನು ಜನರಿಗೆ ಬೋಧಿಸುವಾಗ ಕಥೆಗಳ ಮಾಧ್ಯಮವನ್ನು ಅಳವಡಿಸಿಕೊಂಡದ್ದು ಜೈನ ಕಥಾ ಸಾಹಿತ್ಯಕ್ಕೊಂದು ವರವಾಗಿ ಪರಿಣಮಿಸಿ ಕನ್ನಡ ಸಾಹಿತ್ಯದಲ್ಲಿ ಅನೇಕ ನೋಂಪಿ ಕಥೆಗಳು, ನೋಂಪಿ ಕತೆಯಾಧಾರಿತ ಸ್ವತಂತ್ರ ಕಾವ್ಯಗಳು ಹುಟ್ಟಿಕೊಂಡವು. ಯಾವ ಕಥೆಗಳಿಂದ ಕ್ಷಪಣಕನಲ್ಲಿ ಉತ್ಪನ್ನವಾದ ಅಶುಭ ಪರಿಣಾಮವು ನಷ್ಟವಾಗಿ ಸಂಸಾರ ಶರೀರ ಭೋಗಗಳಿಂದ ವಿರಕ್ತಿ ಉತ್ಪನ್ನ ವಾಗುವುದಕ್ಕೆ ಕಾರಣವಾಗುವುದೋ ಅಂತಹ ಕಥೆಗಳನ್ನು ವ್ರತಾಚರಣೆ ಸಹಿತ ಹೇಳಬೇಕು ಎಂಬುದು ಜೈನರ ನಂಬಿಕೆಯಾದ್ದರಿಂದ ನಂತರದ ಅವಧಿಯಲ್ಲಿ ನೋಂಪಿ ಕತೆಗಳು ಹೇರಳವಾಗಿ ಹುಟ್ಟಿಕೊಂಡವು.

ನಂತರ ಬರುಬರುತ್ತಾ ಈ ವ್ರತಾಚರಣೆಯ ಸಂದರ್ಭದಲ್ಲಿ ಹೇಳಲ್ಪಡುವ ನೋಂಪಿಯ ವ್ರತಗಳು ಗೌಣವಾಗಿ ಕಥೆಯೇ ಪ್ರಧಾನವಾಗ ತೊಡಗಿದವು ಉದಾ: ವಡ್ಡಾರಾಧನೆ ಕಥೆಗಳು, ರತ್ನ ಕರಂಡಕದ ಕಥೆಗಳು, ಸಮ್ಯಕ್ತ ಕೌಮುದಿ ಮುಂತಾದ ಕಥೆಗಳು ಬೆಳೆದು ದೊಡ್ಡದಾಗಿ ಸ್ವತಂತ್ರವಾದ ಕಾವ್ಯಗಳಾದವು. ಪುಷ್ಪದಂತ ಮಹಾಪುರಾಣದಲ್ಲಿ ನೋಂಪಿಗಳ ಉಲ್ಲೇಖ ತಪಸ್ಸಿನ ಹೆಸರಿನಲ್ಲಿ ಉಲ್ಲೇಖಗೊಂಡಿವೆ. ನೋಂಪಿ ಕಥೆಗಳ ರಚನೆ ಹರವು ವೈವಿಧ್ಯತೆಗಳು ಕೇವಲ ಕನ್ನಡದಲ್ಲಿ ಮಾತ್ರ ಕಂಡು ಬರುತ್ತದೆ. ನೋಂಪಿ ಕತೆಗಳು ಕನ್ನಡಕ್ಕೆ ಮಾತ್ರ ವಿಶಿಷ್ಟವಾದವುಗಳು. ಜೈನ ಧರ್ಮದ ಇತಿಹಾಸದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವಂತವುಗಳು. ಸಾಮಾನ್ಯವಾಗಿ ನೋಂಪಿಕತೆಗಳು ಆಶಾಡ ಮಾಸದಿಂದ ಆರಂಭವಾಗಿ ಕಾರ್ತಿಕ ಮಾಸದಲ್ಲಿ ಹೇರಳವಾಗಿ ಆಚರಿಸಲ್ಪಟ್ಟು ಮುಂದೆ ಇಡೀ ವರ್ಷದದ್ದಕ್ಕೂ ಇವುಗಳ ಆಚರಣೆಯು ನಿರಂತರವಾಗಿ ಸಾಗುತ್ತದೆ. ಹೀಗಾಗಿ ಒಂದೊಂದು ಸಂದರ್ಭದಲ್ಲಿ ಒಂದೊಂದು ಹಬ್ಬ ಹರಿದಿನಗಳಲ್ಲಿ ಆಯಾ ವಿಶಿಷ್ಟ ಸಂದರ್ಭಗಳಲ್ಲಿ ಆಚರಿಸಲ್ಪಟ್ಟ ಒಟ್ಟು 300 ನೋಂಪಿ ಕತೆಗಳಿವೆ ಎಂಬುದಾಗಿ ಡಾ. ಬಿ.ಎಸ್. ಕುಲಕರ್ಣಿಯವರು ಅಭಿಪ್ರಾಯ ಪಟ್ಟರೆ, ಡಾ.ಹಂಪ. ನಾಗರಾಜಯ್ಯ ಅವರು ಕನ್ನಡದಲ್ಲಿ ಸುಮಾರು 400 ಬಗೆಯ ನೋಂಪಿ ಕತೆಗಳಿವೆ ಎಂದು ಹೇಳಿದ್ದಾರೆ. ಉದಾಹರಣೆಗೆ ಅನಂತನ ನೋಂಪಿ, ಅಷ್ಟಮಿಯ ನೋಂಪಿ ಕತೆ, ಚಂದನಷಷ್ಠಿ ನೋಂಪಿ, ಋಷಿ ಪಂಚಮಿಯ ನೋಂಪಿ, ಅಕ್ಷತೆಯ ನೋಂಪಿ, ಕರ್ಮದಹನ ನೋಂಪಿ, ಕರ್ಮಹರಾಷ್ಟಮಿಯ ನೋಂಪಿ, ಮುಂತಾದವು.

ಪ್ರಾಚೀನ ಶಾಸನಗಳು ಹಾಗೂ ಕಾವ್ಯ ಕೃತಿಗಳನ್ನು ಗಮನಿಸಿದರೆ ಪ್ರಾಚೀನ ಕಾಲದಿಂದಲೂ ನಮ್ಮಲ್ಲಿ ನೋಂಪಿಗಳನ್ನು ಆಚರಿಸುವ ರೂಢಿ ಇದ್ದುದಕ್ಕೆ ದಾಖಲೆಗಳು ದೊರೆಯುತ್ತವೆ. ಜಾನಪದ ಸಾಹಿತ್ಯದಲ್ಲಿ 'ಅರೆನೋಂಪಿ ಮಾಡಿದರೆ ಕರ್ಮ ಬೆನ್ನತ್ತಿ ಬರುವುದು' ಎಂಬ ಉಲ್ಲೇಖವಿದೆ. ಲೋಂಪಿಗಳು ಕೆಡಲು ಕಾರಣಗಳೇನು ಎಂಬುದನ್ನು ಬ್ರಹ್ಮಶಿವ ತನ್ನ ಸಮಯ ಪರೀಕ್ಷೆಯಲ್ಲಿ 'ಸಾಸಿರ ನೋಂಪಿಯೊಂದೇ ಪಾದರದೊಳೆ ಕೆಟ್ಟು ಪೋಕುಂ,' ಎಂದಿದ್ದರೆ ಸ್ವತಂತ್ರ

ಸಿದ್ಧಲಿಂಗೇಶ್ವರರು, 'ನಿಚ್ಚ ಸಾವಿರ ನೋಂಪಿಯ ನೋಂತು ಒಂದು ದಿನ ಹಾದರ ಮಾಡಿದರೆ ಆ ನೋಂಪಿಯ ಫಲ ಲಭಿಸುವುದೇ ಅಯ್ಯಾ' ಎಂದು ಹೇಳಿದ್ದಾರೆ. ವಡ್ಡಾರಾಧನೆಯ ಕಾಲದಲ್ಲಿ ನೋಂಪಿಗಳ ಆಚರಣೆ ವ್ಯಾಪಕವಾಗಿ ಆಚರಿಸಲ್ಪಡುತ್ತಿದ್ದವು ಎಂಬುದಕ್ಕೆ ಹಲವಾರು ಉದಾಹರಣೆಗಳು ವಡ್ಡಾರಾಧನೆಯ ಕಥೆಗಳಲ್ಲಿ ದಟ್ಟವಾಗಿ ಕಂಡುಬರುತ್ತವೆ. ಆದರೆ ಈ ಕಥೆಗಳನ್ನು ಯಾರು ಯಾರಿಗೆ ಯಾವಾಗ ಹೇಳಿದರು ಎಂಬುದನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ. ಆದರೆ ಹಲವಾರು ಕಥೆಗಳ ಆರಂಭದಲ್ಲಿ ಶ್ರೇಣಿಕ ಮಹಾರಾಜ ಮತ್ತು ಚೇಳಿನಿ ಮಹಾದೇವಿಯರಿಗೆ ಈ ಕಥೆ ಹೇಳಿದರು ಎಂಬುದಾಗಿ ಬರುವುದರಿಂದ ಗೌತಮ ಗಣಧರರಿಂದ ಇಲ್ಲವೇ ಜೈನ ಭಟ್ಟಾರಕರಿಂದ ಈ ಕತೆಗಳು ರಚನೆಗೊಂಡಿರಬೇಕು ಎಂಬುದು ವಿದ್ವಾಂಸರ ಅಭಿಪ್ರಾಯ.

ನೋಂಪಿ ಕಥೆಗಳಲ್ಲಿ ಎರಡು ಭಾಗಗಳಾಗಿ ಎರಡು ಪ್ರಕಾರಗಳನ್ನಾಗಿ ವಿಂಗಡಿಸಬಹುದು. ವೃತ್ತಗಳ ಆಚರಣೆಯನ್ನು ಆಚರಣೆಯ ವಿವರಗಳುಳ್ಳ ಕಥೆಗಳು ಎರಡು ನೋಂಪಿ ಕತೆಗಳನ್ನು ವ್ರತಗಳನ್ನು ಆಚರಿಸಿ ವಲಸಿದ್ಧಿಯನ್ನು ಪಡೆದು ಕೀರ್ತಿ ಶೇಷರಾದವರ ಕುರಿತ ಕಥೆಗಳು. ಇಂತಹ ಕಥೆಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದೊಡ್ಡ ದೊಡ್ಡ ಕಾವ್ಯಗಳಿಗೆ ವಿಷಯವಾಗುವಷ್ಟರ ಮಟ್ಟಿಗೆ ಬೃಹತ್ ಕೃತಿಗಳು ರಚಿಸಲ್ಪಟ್ಟಿವೆ. ಉದಾಹರಣೆಗೆ ಜೀವದಯಾಷ್ಟಮಿ ಕಥೆಯನ್ನು ಆದರಿಸಿ ಬರೆದ ಜನ್ನನ ಯಶೋಧರ ಚರಿತೆ, ಚಂದ್ರಸಾಗರವರ್ಣಿಯ ಜೀವದಯಾಷ್ಟಮಿ ನೋಂಪಿಯ ಕಥೆ, ನಂದೀಶ್ವರ ನೋಂಪಿ ಕತೆ, ಪಟ್ಟಾಭಿರಾಮನ ಪುಷ್ಪಾಂಜಲಿ, ಜನ್ನನ ಅನಂತನಾಥ ಪುರಾಣದ ಅನಂತನೋಂಪಿಯ ಕಥೆ, ನಂದೀಶ್ವರನ ಕಥೆ ಇತ್ಯಾದಿ ಕೃತಿಗಳನ್ನು ಹೆಸರಿಸಬಹುದು. ಕನ್ನಡ ಕಾವ್ಯಗಳಲ್ಲಷ್ಟೇ ಅಲ್ಲದೆ ಕರ್ನಾಟಕದ ಶಾಸನಗಳಲ್ಲಿಯೂ ಅನೇಕ ಕಡೆ ನೋಂಪಿಗಳ ಉಲ್ಲೇಖ ಕಂಡುಬರುತ್ತದೆ. ಕಾಮಲದೇವಿ ಎಂಬುವವಳು 'ನೋಂತು ಪಲ್ಲಹಿಕೆಯಾದಳು' ಎಂಬುದಾಗಿ ಹೆಮ್ಮಡಗಿ (ಸುರಪುರ ತಾ.) ಶಾಸನವು 'ಮಲ್ಲಿಕಾರ್ಜುನನ ವೋಲ್ ನೋಂತವರಾರ್' ಎಂಬುದಾಗಿ ಪಾಲನಕೆರೆ (ಕಲಬುರ್ಗಿ ಜಿ.) ಶಾಸನಗಳು ಉಲ್ಲೇಖಿಸುತ್ತವೆ.

ಕೆಲವೆಡೆ ನೋಂಪಿಯ ಹೆಸರನ್ನು ಹೇಳದೆ ಕೇವಲ ನೋಂಪಿ ನೋನ್ನು ಮುಂತಾದ ಪದಗಳು ಮಾತ್ರ ಬಳಕೆಯಾಗಿವೆ. ಆರಂಭದಲ್ಲಿ ಜೈನ ಧರ್ಮದವರು ನಂತರ ಬರು ಬರುತ ವೀರಶೈವರೂ ಕೂಡ ಅನೇಕ ನೋಂಪಿಗಳನ್ನು ಆಚರಿಸಿದ್ದು ಅದರ ಬಗ್ಗೆ ಕಾವ್ಯ ಕೃತಿಗಳಲ್ಲಿ ದಾಖಲೆಗಳು ದೊರೆಯುತ್ತವೆ. ಬಸವಣ್ಣನವರ ತಾಯಿಯಾದ ಮಾದಲಾಂಬಿಕೆಯು ನಂದಿನೋಂಪಿ ಆಚರಿಸಿ ಬಸವಣ್ಣನವರನ್ನು ಪಡೆದಿದ್ದಕ್ಕೆ ಅದರ ಬಗ್ಗೆ ಹರಿಹರನ 'ಬಸವರಾಜದೇವರ ರಗಳೆ'ಯಲ್ಲಿ ಉಲ್ಲೇಖವಿದೆ. ಜೈನ ಕವಿಗಳಾದ ನಯಸೇನಾ ಧರ್ಮಾಮೃತದಲ್ಲಿ ಐರಾವತ ನೋಂಪಿ, ಜನ್ನನ ಯಶೋಧರ ಚರಿತೆಗೆ ಮತ್ತು ಅನಂತನಾಥ ಪುರಾಣದಲ್ಲಿ ಜೀವನೋಂಪಿಯನ್ನು ಆಚರಿಸಿದ್ದು ಕಂಡುಬರುತ್ತದೆ. ಕೆಲವರು ಇವುಗಳನ್ನು ನಿರ್ದಿಷ್ಟ ಕಾಲಮಿತಿಯಲ್ಲಿ ಆಚರಿಸಿದರು ಮತ್ತೆ ಕೆಲವರು ಇವುಗಳನ್ನು ಅನು ವ್ರತಗಳಂತೆ ಜೀವನದುದ್ದಕ್ಕೂ ನಿಯಮಿತವಾಗಿ ಪಾಲಿಸಿದಕ್ಕೆ ಮೊಹೊನ್ನತವಾದ ಉದ್ದೇಶದಿಂದ ಆಚರಿಸಲ್ಪಟ್ಟ ನೋಂಪಿ ಎಂದರೆ ಕ್ಷಿತಿರುಹ ನೋಂಪಿ ಕ್ಷಿತಿರು ಸಕಲ ಮಾನವರಾದಿಯಾಗಿ ಎಲ್ಲರಿಗೂ ಬಾಳಿ ಬದುಕಲು ಆಸರೆಯಾದ ಈ ಪ್ರಪಂಚದ ರಕ್ಷಣೆಗಾಗಿ ಉಳಿವಿಗಾಗಿ ಪ್ರಾಣಿ–ಪಕ್ಷಿ ಸಂಕುಲದ ಉಳಿವಿಗಾಗಿ ಪರಿಸರವನ್ನು ರಕ್ಷಿಸಲು ಗಿಡಮರಗಳನ್ನು ನೆಟ್ಟು ಬೆಳೆಸುವ ಕರ್ತವ್ಯವನ್ನು ವ್ರತದ ರೀತಿಯಲ್ಲಿ ಪಾಲಿಸುವುದು ಎಂದರ್ಥ. ಅದರಲ್ಲಿಯೂ ಮಹಿಳೆಯರೇ ಮುಂದಾಗಿ ವಿಶೇಷವಾಗಿ ಇಂತಹ ನೋಂಪಿಗಳನ್ನು ಸಾವಿರ ವರ್ಷಗಳ ಹಿಂದೆ ವ್ರತವಾಗಿ ಆಚರಿಸಿ ಇಂದಿನ ಪರಿಸರ ರಕ್ಷಣೆಯಂತಹ ಚಳುವಳಿಗೆ ಕಾರಣವಾದದ್ದು ಚಳುವಳಿ ಯೋಗಾಧಿಯಲ್ಲಿ ಸಾಮಾಜಿಕ ಜಾಗೃತಿಗೆ ಕಾರಣವಾದದ್ದು ಮುಂಬರುವ ಜನಾಂಗದಲ್ಲಿ ಪ್ರಕೃತಿ ಪ್ರೇಮವನ್ನು ಮೂಡಿಸಲು ಪ್ರೇರಣೆ ನೀಡಿದ್ದು ಇನ್ನೂ ವಿಶೇಷ.

ತಾಯಿಯಾಗಿ ಪತ್ನಿಯಾಗಿ ಸಹೋದರಿಯಾಗಿ ಸಾಂಸ್ಕೃತಿಕ ಮೌಲ್ಯಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಿತ್ತುವಲ್ಲಿ ಮಹಿಳೆಯರು ವಹಿಸಿದ ಪಾತ್ರ ತುಂಬ ದೊಡ್ಡದು. ಬಹುಕಾಲದಿಂದಲೂ ತಾಯಿ ನೀಡಿದ ಸಂಸ್ಕಾರಗಳೇ ಮಕ್ಕಳಲ್ಲಿ ಗಟ್ಟಿಯಾಗಿ ಬೇರೂರಿ, ಸಾಮಾಜಿಕವಾಗಿ ಆದರ್ಶ ಮಾರ್ಗದಲ್ಲಿ ಮುಂದುವರಿಯಲು ಪ್ರೇರಣೆಯನ್ನು ನೀಡುತ್ತವೆ ಎಂಬುದಕ್ಕೆ ಕರ್ನಾಟಕದ ಹಲವಾರು ಶಾಸನಗಳಲ್ಲಿ ಸಾಕಷ್ಟು ಉದಾಹರಣೆಗಳು ದೊರೆಯುತ್ತವೆ.

"ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗರಮಂ ಮಾಡಿಸು

ಚ್ಚೆರೆಯೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರರಿಗಿಂಬುಕೆಯ್ ನಂಬಿದ

ರ್ಗೆರಿವಟ್ಟಾಗಿರು ಶಿಷ್ಟರಂ ಪೊರೆಯೊನುತ್ತಿಂತೆಲ್ಲವಂ ಪಿಂದೆತಾ

ಯರೆದಳ್ವಲೆರೆಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ"[3]

ಎಂಬುದಾಗಿ ಹಂಪೆಯ ವಿಜಯನಗರದ ಅರಸು ಪ್ರೌಢದೇವರಾಯನ ಕಾಲದ ಕ್ರಿ.ಶ. 1411 ರಲ್ಲಿ ರಚಿತವಾದ ಶಾಸನವೊಂದು ಲಕ್ಷ್ಮೀಧರ ಅಮಾತ್ಯನಿಗೆ ದಾನ ದತ್ತಿ ಧರ್ಮ ಪುಣ್ಯಕಾರ್ಯಗಳನ್ನು ಕೈಕೊಳ್ಳಲು ಅವನ ತಾಯಿ ಸಿಂಗಾಂಬಿಕೆ ಬಾಲ್ಯದಲ್ಲಿ ಅವನಿಗೆ ಹಾಲೂಡುತ್ತಾ ಈ ಮೇಲಿನ ಧರ್ಮಕಾರ್ಯಗಳನ್ನು ಕೈಗೊಳ್ಳುವಂತೆ ಜೋಗುಳದ ರೂಪದಲ್ಲಿ ಹಾಡಿದ್ದೇ ತನಗೆ ಧರ್ಮ ಕಾರ್ಯಗಳನ್ನು ಕೈಕೊಳ್ಳಲು ಪ್ರೇರಣೆಯಾಯಿತು ಎಂಬುದಾಗಿ ಹೇಳಿಕೊಂಡಿದ್ದಾನೆ. ಆದರೆ ಈ ಸಂದರ್ಭದಲ್ಲಿ ಮರಗಳನ್ನು ಬೆಳಸುವ ಬಗ್ಗೆಯಾಗಲಿ, ದಾನ ಕೊಡುವ ಬಗ್ಗೆಯಾಗಲಿ ಎಲ್ಲಿಯೂ ಪ್ರಸ್ತಾಪವಿಲ್ಲ. ಆದರೆ ವಿಜಯನಗರ ರಾಜರ ಆಳ್ವಿಕೆಯ ಕಾಲದಲ್ಲಿ ಇತರೆ ಪುಣ್ಯ ಕೆಲಸಗಳ ಜೊತೆಯಲ್ಲಿ ಮರಗಳನ್ನು ನೆಡುವ ತೋಪು ಉದ್ಯಾನವನಗಳನ್ನು ಬೆಳೆಸುವ ಕಾರ್ಯ ನಿರಂತರವಾಗಿ ನಡೆಯುತ್ತಿತ್ತು ಎಂಬುದಕ್ಕೆ ತಿಳಿಸುವ ಹಲವಾರು ಶಾಸನಗಳು ದೊರೆತಿವೆ.

ಪರಿಸರದ ಕಾಳಜಿ ಆದರೆ ಅದಕ್ಕಿಂತ ಪೂರ್ವದಲ್ಲಿಯೇ ಕಲ್ಯಾಣ ಚಾಲುಕ್ಯ ದೊರೆ ಜಯಸಿಂಹನ ಕಾಲದ 'ತಳ್ಳಂಗೆರೆ ಶಾಸನ'ದಲ್ಲಿ ಮಹಿಳೆಯೋರ್ವಳು ಜಯಸಿಂಹನಿಂದ ಸವಳು ಭೂಮಿಯೊಂದನ್ನು ಪಡೆದು ಅದರಲ್ಲಿ ವಿವಿಧ ಜಾತಿಯ ವೃಕ್ಷ ಮತ್ತು ಬಳ್ಳಿಗಳನ್ನು ಬೆಳೆದು ನಂದನವನವನ್ನಾಗಿ ಮಾಡಿದಳೆಂದು ಈ ಶಾಸನವೂ ತಿಳಿಸುತ್ತದೆ. ಮರಗಳನ್ನು ನೆಟ್ಟು ಪೋಷಿಸುವುದು ಕೂಡ ಒಂದು ಪುಣ್ಯ ಕಾರ್ಯವೆಂದು ನಂಬಿದ ಈಕೆ ಮರಗಳನ್ನು ಬೆಳೆಸುವುದನ್ನೇ ಆರಿಸಿಕೊಂಡಳು. ಎಂಬುದಾಗಿ ತಿಳಿದುಬರುತ್ತದೆ.

ಕ್ರಿ.ಶ. 1174 ರಲ್ಲಿ ಕಲ್ಯಾಣದಲ್ಲಿ ರಾಯ ಮುರಾರಿ ಸೋವಿದೇವನು ಆಳುತ್ತಿದ್ದಾಗ ನಿಂಬಹಳ್ಳಿಯ ಕೋಟಿಶಂಕರ ದೇವರಿಗೆ ತಡವಳಿಗೆಯ ಅಂದರೆ ಇಂದಿನ 'ತಡವಲಗಾ' ಅಥವಾ 'ತಡೋಳ' ಎಂಬ ಊರಿನ ಪ್ರಭು ವಾರರಸ, ಬಸವರಸ, ಬೀಚರಸ, ಭೂತರಸ ಮೊದಲಾದವರು ಸೇರಿ ಭೂದಾನ ನಿವೇಶನ ದಾನದ ಜೊತೆಯಲ್ಲಿ ಮರಗಳನ್ನು ನೆಟ್ಟು ಬೆಳೆಸಿ, ದಾನಮಾಡುವ ಕಾರ್ಯವನ್ನು ನಿರಂತರವಾಗಿ ನಡೆಸುತ್ತಿದ್ದರೆಂಬುದನ್ನು ಇಂಡಿ ಶಾಸನವು (ನಂ.39) ತಿಳಿಸಿದರೆ, ಇದೇ ರೀತಿಯ ಪುಣ್ಯ ಕಾರ್ಯಗಳು ಆ ಭಾಗದಲ್ಲಿ ನಿರಂತರವಾಗಿ ನಡೆಯುತ್ತಿತ್ತು ಎಂಬುದಕ್ಕೆ ಹಲವಾರು ಶಾಸನಗಳು ಉದಾಹರಣೆಯನ್ನು ಒದಗಿಸುತ್ತವೆ.

ಕ್ರಿ.ಶ. 1190 ರಲ್ಲಿ ಯಾದವ ದೊರೆ ಬಿಲ್ಲಮನು ರಾಜ್ಯವಾಳುತ್ತಿದ್ದಾಗ ಕುಂತಳ ದೇಶದ ತರ್ದವಾಡಿ ಸಾಸಿರಕ್ಕೆ ಸೇರಿದ ಬೇವಿನೂರ ಪ್ರಾಂತವನ್ನು ಕೇಂದ್ರವನ್ನಾಗಿಟ್ಟುಕೊಂಡು ಆಳುತ್ತಿದ್ದ ಮಾಯಿದೇವ ಎಂಬ ಅಧಿಕಾರಿಯ ಆಧೀನದಲ್ಲಿ 36 ಹಳ್ಳಿಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದ ಅಧಿಕಾರಿ ಬೊಪ್ಪಣ್ಣ ಎಂಬುವವನ ಪತ್ನಿಯಾದ ಸಿರಿದೇವಿ ಎಂಬುವವಳೇ 'ಕ್ಷಿತಿರುಹ ನೋಂಪಿ'ಯನ್ನು ಕೈಕೊಂಡು ವೃಕ್ಷ ಸಂಪತ್ತನ್ನು ಬೆಳೆಸಿದ್ದಕ್ಕೆ ಬೇವಿನೂರು ಶಾಸನವು ದಾಖಲೆಗಳನ್ನು ಒದಗಿಸುತ್ತದೆ. ಸಿರಿದೇವಿಯ ಪತಿ ಬೊಪ್ಪಣ್ಣ ನಾಯಕನು ಬೇವಿನೂರಲ್ಲಿ ಧರ್ಮ ಸಂತೆಯನ್ನು ನೆರೆಯುವಂತೆ ಮಾಡಿದರೆ ಅವನ ಪತ್ನಿ ಸಿರಿದೇವಿಯು ಮರಗಳನ್ನು ನೆಟ್ಟು ಬೆಳೆಸುವ 'ಕ್ಷಿತಿರುಹ ನೋಂಪಿ' ಎಂಬ ವ್ರತವನ್ನು ಸ್ವೀಕರಿ ವಿವಿಧ ಬಗೆಯ ಮರಗಳನ್ನು ಬೆಳಸಿ (ಉದ್ಯಾನವನವನ್ನು) ದಾನ ಮಾಡುತ್ತಾಳೆ. ಈಗಿನ ಇಂಡಿ ತಾ. ಹೀರೆಬೇವಿನೂರನೊಳಗೊಂಡು ಸುತ್ತಲಿನ 36 ಹಳ್ಳಿಗಳ ಒಡೆಯನಾದ ಬೊಪ್ಪಣ್ಣ ನಾಯಕನ ಪತ್ನಿಯು ಸಿರಿದೇವಿಯು ವ್ರತಸಾರಸಮುಚ್ಚಯದಲ್ಲಿ ಮತ್ತು ಸ್ಮತಿಗಳಲ್ಲಿ ಅತ್ಯಂತ ಶ್ರೇಷ್ಟವಾದ ನೋಂಪಿ ಯಾವುದೆಂದು ಧರ್ಮಜ್ಞರನ್ನು ಗುರು–ಹಿರಿಂಯರನ್ನು ಕೇಳಲಾಗಿ

"ವ್ರತಸಾರ ಸಮುಚ್ಛಯ ದೊಳ್
ಸ್ಮೃತಿಯೊಳ್ಕೇಳೆನಿತು ನೋಂಪಿಯೊಳವೆನಿತನಿತಂ
ಸತತಂ ನೋನ್ತೊಲವಿಂದಂ
ಕ್ಷಿತಿರುಹವಿದುವೊಂದು ನೋಂಪಿಯುಟಂನೆ ಕೇಳ್ದಳು"[4]

"ಪರಮಾನನ್ದದೆ ಕೇಳ್ದು ಭೂತಳದ ಕಳ್ಪೋರ್ಬಿಜಮನೆಂದು ಮಾ
ಮರನಂ ನೇರಿಲೆನೀಳೆಯಂ ಪಲಸುಮಂ ಖರ್ಜೂರಮಂ ತೆಂಗುಮಂ
ವರಪೂಗೀತರುಮಂ ವನಸ್ಸತಿಯನತ್ಯಾನಂದದಿಂದಿಟ್ಟುಂ ತಾಂ
ಧರೆ ಮೆಚ್ಚುತ್ತಿರೆ ಮಾಯಿದೇವನೆ ಸೇವೀ ಧರ್ಮ್ಮದಿದಿಕ್ಕಂದದಂ"[5]

ಎಂಬುದಾಗಿ ಸಿರಿದೇವಿಯು ನೇರಳೆ ಈಳೆ ಫಲಸು ಖರ್ಜೂರ ತೆಂಗು ಹೋಗಿದ್ದರು ವನಸ್ಪತಿ ಮರಗಳನ್ನು ಸಂತೋಷದಿಂದ ಬೆಳೆಸಿದಂತೆ ಶಾಸನದಲ್ಲಿ ಹೇಳಲ್ಪಟ್ಟಿದೆ. ಇವಳು ತೋಟವನ್ನು ಬೆಳೆಸಿದರೆ ಇವಳ ಪತಿಯು ಇವಳ ಪತಿಯಾದ ಬೊಪ್ಪಣ್ಣ ನಾಯಕ ಸಂತೆಯನ್ನು ನೆರೆಸಿ ಇರುವರು ತಮ್ಮ ಉದ್ಯಾನವನ ಮತ್ತು ಸಂತೆಯ ಸೇವೆಯನ್ನು ಸರ್ವರಿಗೂ ಅನುಕೂಲವಾಗಲೆಂದು ಮಾಡಿ ತಮ್ಮ ಒಡೆಯ ಮಾಯಿದೇವನಿಗೆ ಅರ್ಪಿಸಿದನ್ನು ಕ್ರಿಶ 1190ರ ಬೇವಿನೂರು ಶಾಸನವೂ ಉಲ್ಲೇಖಿಸುತ್ತದೆ. ಮುಂದುವರೆದು ಅವಳ ಪತಿಯಾದ ಬೊಪ್ಪಣ್ಣ ನಾಯಕನು 36 ಬೀಡಿನ ಗಾವುಂಡರಿಗೆ, ಶೆಟ್ಟಿಗುತ್ತರಿಗೆ, ಮುಮ್ಮಡಿ ದಂಡರಿಗೆ, ಗವರೆಗಾತ್ರಿರಿಗೆ ಹಾಗೂ ಸುಂಕಿಗರಿಗೆ ಒಟ್ಟಿಗೆ ಸೇರಿಸಿ ಬೇವಿನೂರಿನಲ್ಲಿ ಧರ್ಮ ಸಂತೆಯನ್ನು ನೆರಸಿ ಆ ಸಂದರ್ಭದಲ್ಲಿ ಪತ್ನಿ ಸಿರಿದೇವಿ ಪತಿ ಬೊಪ್ಪಣ್ಣನೊಡಗೂಡಿ ತಮ್ಮ ಒಡೆಯ ಮಾಯಿದೇವನಿಗೆ ಆ ಉದ್ಯಾನವನವನ್ನು ಅರ್ಪಿಸುತ್ತಾರೆ. ಸಿರಿದೇವಿಯು ಸಂತೋಷದಿಂದ ಅರ್ಪಿಸಿದ ಉದ್ಯಾನವನ್ನು ಸಂತೆಯನ್ನು ಸ್ವೀಕರಿಸಿದ ಮಾಯಿದೇವನು 'ಬೇವಿನೂರಿನ ತಲೆಯ ಕಾವ ದೇವರಿಗೆ 3 ಮಾವಿನ ಮರ, 1 ಹುಣಸೆ ಮರ, 1 ನೇರಳೆ ಮರ ಭೋಗೇಶ್ವರ ದೇವರಿಗೆ 3 ಮಾವು, 1 ಹುಣಸೆ, 1 ನೇರಳೆ, ಸಾತ್ವೇಶ್ವರ ದೇವರಿಗೂ 3 ಮಾವು, 1 ಹುಣಸೆ, 1 ನೇರಳೆ ಮರಗಳನ್ನು ದಾನವಾಗಿ ಬಿಡುತ್ತಾನೆ.

ಈ ಶಾಸನವನ್ನು ಹೇಳಿ ಬರೆದ ಕವಿ ಬೆಡಗಿನ ಸೋಮನಾಥ ಪಂಡಿತರಿಗೆ 8 ಮಾವಿನ ಮರ, ಶೆಟ್ಟಿಗುತ್ತ ಮುಮ್ಮರಿ ದಂಡರಿಗೆ 5 ಮಾವಿನ ವೃಕ್ಷದಾನಗಳನ್ನು ಮಾಡಿದ್ದಾಗಿ ತಿಳಿದುಬರುತ್ತದೆ. ಖೇಡ ಈಗಿನ (ಧೂಳಖೇಡದ) ಸ್ವಯಂಭೂ ದೇವರಿಗೆ 8 ಮಾವಿನ ಮರ, 1 ಹುಣಸೆ, 1 ನೇರಳೆ, ಶೆಟ್ಟಿಗುತ್ತರಿಗೆ 1 ಸೊಲಗೆ ಎಣ್ಣೆಯನ್ನು ಸಂತೆಯ ಆದಾಯವನ್ನು ದಾನವಾಗಿ ಬಿಡುತ್ತಾರೆ.[6]

ಅಷ್ಟೇ ಅಲ್ಲದೆ ತನ್ನ ಆಧಿನ ಅಧಿಕಾರಿಗಳಾದ ತರ್ದವಾಡಿ ಸಾಸರದ ಮನ್ನೆಯ ವೀರ ಬಂದರಸ ತನ್ನ ಅಧಿಕಾರಿ ಬೊಪ್ಪಣ್ಣ ನಾಯಕನಿಗೂ ದಾನ ನೀಡಲು ಆದೇಶಿಸುತ್ತಾನೆ. ಅದೇ ರೀತಿ "ಬೇವಿನೂರಿನ ಮಲ್ಲಗಾಂಡನ್ನು ಬೇವಿನ 8 ಹಿಟ್ಟು ಸ್ಥಾನವನ್ನು ಸೇನಬೋವನ 60 ಒಕ್ಕಲು ಮುಖ್ಯವಾಗಿ ಅಳುಹುರದ ಸೀಮೆಯ ಪೂರ್ವದ ಖೇಡ ಗ್ರಾಮದ ಸೀಮೆಯ ಉತ್ತರದ ರೇವಣೇಶ್ವರ ಗೋವೆಯ ಸೀಮೆಯ ಪಶ್ಚಿಮಕ್ಕೆ ಹಲವಾರು ಮರಗಳನ್ನು ನೆಟ್ಟು ಬೆಳೆಸಿ ಅದನ್ನು ಚೆನ್ನಾಗಿ ಕಾಪಾಡಬೇಕೆಂದು ಸೂಚಿಸಿ ಆ ತೋಪಿನ ರಕ್ಷಕನಾಗಿ (ಫಾರೆಸ್ಟ್ ಗಾರ್ಡ್) ಕಾಯುತ್ತಿದ್ದ ಚೌಡಯ್ಯನಿಗೆ ಒಟ್ಟು 53 ಬೃಹತ್ ವೃಕ್ಷಗಳು ಹಾಗೂ ವನಸ್ಪತಿ ಸಸ್ಯಗಳನ್ನು ಸೇರಿಸಿ ದಾನಬಿಟ್ಟ ವಿಷಯ ಬೇವಿನೂರಿನ ಇನ್ನೊಂದು ಶಾಸನದಲ್ಲಿ ಉಲ್ಲೇಖವಿದೆ."[7]

ಹಿರೇಬೇವಿನೂರ ಶಾಸನದ ಪ್ರಕಾರ 175 ರ ಪ್ರಕಾರ ಶ್ರೀದೇವಿ ದಾನಕೊಟ್ಟ ಅವಳು ನೆಟ್ಟ ಮರಗಳ ಸಂಖ್ಯೆ ಮಾವಿನ ಮರ 41, ಹುಣಸೆ ಮರ 6, ನೇರಳೆ ಮರ 6 ಹಾಗೂ ಇತರೆ ವನಸ್ಪತಿ ಗಳ ಮರಗಳ ಸಂಖ್ಯೆ ದೊರೆಯುವುದಿಲ್ಲವಾದರೂ ಅವಳು ಒಟ್ಟು 53 ಬೃಹತ್ ವೃಕ್ಷಗಳನ್ನು ಹಾಗೂ ವನಸ್ಪತಿ ಸಸ್ಯಗಳನ್ನು ನೆಟ್ಟು ಬೆಳೆಸಿದಳು ಎಂದು ತಿಳಿದು ಬರುತ್ತದೆ. ಮಾಯಿದೇವ ನಾಯಕನಿಂದ ರಕ್ಷಿಸಲ್ಪಟ್ಟ ಮೀಸಲು ಅರಣ್ಯ ಅಥವಾ ರಕ್ಷಿತಾರಣ್ಯ ಎಂದು ಕರೆವುದು ಉಚಿತ ಎಂದು ಎಣಿಸುತ್ತದೆ. ಎಲ್ಲ ದಾನಗಳಂತೆ ಈ ಬೇವಿನೂರ ಶಾಸನದಲ್ಲಿಯೂ ಶಾಪಶಯ

ವಾಕ್ಯಗಳೊಂದಿಗೆ ಮುಕ್ತಾಯವಾಗಿದೆಯಲ್ಲದೆ ಈ ಶಾಸನದ ಕೊನೆಗೆ ಇದು ರಾಜರಕ್ಷಿತ ಧರ್ಮ ಎಂಬ ಅಂಕಿತವಿದ್ದದ್ದು ವಿಶೇಷ. ಇಂದಿನ ಕರಾವಳಿ ಭಾಗದಲ್ಲಿ ಬರುವ ದೇವರ ಕಾಡು ಎಂದು ಕರೆಯಲ್ಪಡುವ ಕಾಡು ಹಿಂದೆ ಸಿರಿದೇವಿಯಂತವರು ಬೆಳೆಸಿದ ಕ್ಷಿತಿರುಹ ನೋಂಪಿ ವ್ರತದೋಪಾದಿಯಲ್ಲಿ ಸ್ವೀಕರಿಸಿ ಬೆಳೆಸಿದ ರಕ್ಷಿತಾಣ್ಯಗಳೇ ಆಗಿರಬೇಕು ಎಂದೇನಿಸುತ್ತದೆ.

ಬೇವಿನೂರ ಶಾಸನಕ್ಕಿಂತಲೂ ಪೂರ್ವದಲ್ಲಿಯೂ ವೃಕ್ಷದಾನದ ಪರಂಪರೆ ನಮ್ಮಲ್ಲಿತು ಎಂಬುದಾಗಿ ತಿಳಿದು ಬರುತ್ತದೆ. ಅಂದರೆ "ರಾಯ ಮುರಾರಿ ಸೋವಿ ದೇವನ ಆಳ್ವಿಕೆಯಲ್ಲಿ ಇಂಡಿ ತಾಲೂಕು ನಿಂಬಾಳದ ಶಾಸನದಲ್ಲಿ ನಿಂಬಾಳದ ಕೋಟಿಶಂಕರ ದೇವರಿಗೆ ತಡವಳಿಗೆಯ ಪ್ರಭು ವಾರರಸ ಬಸವರಸ ಬೀಚರಸ ಭೂತರಸ ಮೊದಲಾದವರು ಸೇರಿ ಭೂದಾನ ನಿವೇಶನ ದಾನ ಮಾಡಿದ ಜೊತೆಗೆ ಒಂದು ಹುಣಸೆಯ ಮರವನ್ನು ಸಮೀಪದ ಗುಣವಲ್ಲಿಗೆಯಲ್ಲಿ ದಾನ ನೀಡಿದ ಉಲ್ಲೇಖವಿದೆ."[8] ಬಾಗೇವಾಡಿ ಶಾಸನ ಒಂದರಲ್ಲಿ ಹುಣಸೆ ಫಲವನ್ನು ದೇವಾಲಯಕ್ಕೆ ದಾನ ನೀಡಿದ ಉಲ್ಲೇಖವಿದೆ. ಅಷ್ಟೇ ಅಲ್ಲದೆ ಪ್ರಾಚೀನ ಕಾಲದಲ್ಲಿ ವೃಕ್ಷಗಳನ್ನು ದಾನವಾಗಿ ಬಿಡುವುದು ಅದರ ಫಲವನ್ನು ದೇವರಿಗೆ ಅರ್ಪಿಸುವುದು ಸರ್ವೇಸಾಮಾನ್ಯವಾಗಿತ್ತು ಆದರೆ ಉತ್ತರ ಕರ್ನಾಟಕ ಭಾಗದಲ್ಲಿ ಇಂದಿಗೂ ಸಹ ವರ್ಷದ ಆರಂಭದಲ್ಲಿ ಬೆಳೆದ ಪ್ರಥಮ ಫಲವನ್ನು ದೇವರಿಗೆ ಅರ್ಪಿಸುವುದು ಕಡ್ಡಾಯವಾಗಿರುವುದನ್ನು ಕಾಣಬಹುದು .

ಪರಿಸರವನ್ನು ರಕ್ಷಿಸಬೇಕೆಂಬ ಕಾಳಜಿ ಕೆಲವು ಜನ ಪರಿಸರ ಪ್ರಿಯರಿಗೆ ಇರುವುದು ಇಂದು ನಿನ್ನೆಯದಲ್ಲ, ಪಂಪನ ಆದಿಪುರಾಣದಲ್ಲಿ ಭರತ ಚಕ್ರವರ್ತಿ ತನ್ನ ರಾಣಿಯರು ಉದ್ಯಾನವನದಲ್ಲಿ ವಿಹರಿಸುವಾಗ ಎಲೆ, ಹೂ, ಹಣ್ಣು ಮೊಗ್ಗುಗಳನ್ನು ಕೀಳದಂತೆಯೂ ಅವುಗಳು ನೊಂದುಕೊಳ್ಳುತ್ತವೆ ಎಂಬುದಾಗಿಯೂ ಹೇಳುವ ಮಾತು ಭರತನ ಪರಿಸರ ಪ್ರೇಮವನ್ನು ಸೂಚಿಸುತ್ತದೆ. ಅಲ್ಲದೇ ಅನೇಕರು ಕೆರೆ, ಕಟ್ಟೆ, ಭಾವಿಗಳನ್ನು ನಿರ್ಮಿಸುವಾಗ ಉದ್ಯಾನವನಗಳನ್ನು ನಿರ್ಮಿಸಿದ್ದು ವಿಶೇಷ. ಆದರೆ ಇನ್ನೂ ವಿಶೇಷವಾಗಿ ಉದ್ಯಾನವನವನ್ನು ಅಥವಾ ವೃಕ್ಷಗಳನ್ನು ಬೆಳೆಸುವ ಪ್ರಕ್ರಿಯೆಯನ್ನು ಮಹಿಳೆಯರು 800 ವರ್ಷಗಳ ಹಿಂದೆಯೇ ಪವಿತ್ರ ವ್ರತದೋಪಾದಿಯಲ್ಲಿ ಆಚರಿಸಿದ್ದು ಸಿರಿದೇವಿಯ ತಾಳ್ಮೆ ಲೋಕೋಪಕಾರದ ಗುಣವನ್ನು ಎತ್ತಿ ತೋರಿಸುತ್ತದೆ. ಅಂದಿನ ಸಂದರ್ಭದಲ್ಲಿ ಗೋದಾನ, ಭೂದಾನ, ಸುವರ್ಣ ದಾನಗಳೊಂದಿಗೆ ವೃಕ್ಷದಾನಕ್ಕೂ ಮುನ್ನುಡಿ ಬರೆಯಲು ಕಾರಣವಾಗಿ ವೃಕ್ಷಗಳನ್ನು ನೆಟ್ಟು ಬೆಳೆಸುವ ಸುಧೀರ್ಘಕಾಲದ ಪ್ರಕ್ರಿಯೆಯನ್ನು ನೋಂಪಿಯ ರೂಪದಲ್ಲಿ ಆಚರಿಸಿದ್ದು ತುಂಬ ಮಹತ್ವದ ವಿಷಯವಷ್ಟೇ ಅಲ್ಲದೆ ಮುಂದಿನ ಜನಾಂಗಕ್ಕೆ ಈ ನಡೆ ಮಾದರಿಯಾಗಿ ನಿಲ್ಲುತ್ತದೆ. ಉಳಿದ ವ್ರತ ನೋಂಪಿಗಳಂತೆ ಕೆಲವು ದಿನ ಕೆಲವು ಪಕ್ಷ ಕೆಲವು ಮಾಸಗಳಿಗೆ ಮಾತ್ರ ಸೀಮಿತವಾಗದೆ ಈ ನೋಂಪಿಯನ್ನು ಜೀವನದುದ್ದಕ್ಕೂ ಆಚರಿಸಿ ಪಾಲಿಸಿದ ಬೇವಿನೂರು ಶಾಸನೊಕ್ತ ಸಿರಿದೇವಿ ಹಾಗೂ ಆಧುನಿಕ ಯುಗದಲ್ಲಿ ನಮ್ಮ ನಡುವೆಯೇ ವೃಕ್ಷಗಳನ್ನು ಬೆಳಸುವುದೇ ಜೀವನದ ಮೂಲ ಉದ್ದೇಶವಾಗಿಟ್ಟುಕೊಂಡು ವೃಕ್ಷಗಳನ್ನು ಮಕ್ಕಳಂತೆ ಪ್ರೀತಿಯಿಂದ ಪಾಲಿಸಿದ ಸಾಲುಮರದ ತಿಮ್ಮಕ್ಕ ಮುಂಬರುವ ಜನಾಂಗಕ್ಕೆ ಶಾಶ್ವತ ಮಾದರಿಯಾಗಿ ನಿಲ್ಲುತ್ತಾರೆ.

**ಕೊನೆಯ ಟಿಪ್ಪಣಿ:**


1. ಆ.ನೇ.ಉಪಾಧ್ಯೆ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ–4, ಭಾಗ–2, ಪುಟ–209.
2. ಹಂಪನಾ, ನೋಂಪಿ ಕಥೆಗಳು, ಪುಟ–54.
3. ಸೌ.ಇಂ.ಇನ್ಸ್. ಸಂಪುಟ–4, ಪುಟ–267
4. ಕನ್ನಡ ಶಾಸನ ಸಂಪುಟ–ಹತ್ತು, ಪುಟ–62
5. ಅದೇ, ಪುಟ–62.
6. ಬಿಕೆ 36 1937–38, ಎಸ್.ಐ.ಎಕ್ಸ್, ಎಕ್ಸ್, ಇಂಡಿ ಶಾಸನ, ಬೀಜಾಪುರ ಜಿಲ್ಲೆಯ ಸಾಸನ ಸಂಪುಟ, ಪುಟ–175
7. ಅದೇ, ಪುಟ–175.
8. ಅದೇ, ಪುಟ–155

ಮರ–ಗಿಡಗಳನ್ನು ಬೆಳೆಸುವ ಕ್ರಿಯೆಯನ್ನು ನೋಂಪಿ ಅಥವಾ ಪವಿತ್ರ ವ್ರತವಾಗಿ ಸ್ವೀಕರಿಸಿದವಳು ಶ್ರೀದೇವಿ ಎಂಬುವವಳು. ಕ್ರಿ.ಶ. 1190ರಲ್ಲಿ ಯಾದವ ಬಿಲ್ಲಮನು ರಾಜ್ಯವಾಳುತ್ತಿದ್ದಾಗ ಅವನ ಅಧಿಕಾರಿ ಯಾದ ಮಾಯಿ ದೇವ ಎಂಬುವವನು ಬೇವಿನೂರು ಪ್ರದೇಶವನ್ನು ಆಳುತ್ತಿದ್ದ ೊರಿಯದ ಬೊಪ್ಪಣ್ಣ ನಾಯಕ ಎಂಬುವನು ದೇಶದ ತರ್ದವಾಡಿಗೆ ಸೇರಿದ ಅರ್ಧವಾಡಿ ಸಾಸಿವೆ ನೂರನ್ನು ಒಳಗೊಂಡು ಒಟ್ಟು 36 ಹಳ್ಳಿಗಳ ಒಡೆಯನಾಗಿದ್ದನು ಈತನ ಪತ್ನಿ ಶ್ರೀದೇವಿ ಎಂಬುವವಳೆ ಆಚರಿಸಿದವಳು. ಯಾದವ ದೊರೆ ಬಿಲ್ಲಮನ ಅಧಿಕಾರಿ ಮಹಿದೇವ ಈತನ ಕಿರಿಯ ಅಧಿಕಾರಿ ಈಗಿನ ಹಿಂಡಿ ತಾ ಹಿರೇಬೇವಿನ ಒಳಗೊಂಡು ಸುತ್ತಲಿನ 36 ಹಳ್ಳಿಗಳ ಒಡೆಯನಾದ ಬೊಪ್ಪಣ್ಣ ನಾಯಕನ ಪತ್ನಿ ಸಿರಿದೇವಿಯು ರಥಸಾರ ಸಮುಚ್ಛೇದಲ್ಲಿ ಮತ್ತು ಸ್ಮೃತಿಗಳಲ್ಲಿ ಅತ್ಯಂತ ಶ್ರೇಷ್ಠವಾದ ನೋಂಪಿ ಯಾವುದೆಂದು ಧರ್ಮಜ್ಞರನ್ನು ಗುರುಗಳನ್ನು ಹೇಳಲಾಗಿ

ಚಿಟಿರೋಹ ಇದು ಒಂದು ನೋಂಪಿಯಂತೆನೆ ಕೇಳಿದಳು ಪರಮಾನಂದದೆ ಕೇಳ್ದು ಭೂತಳದ ಬೀಜಮನೆಂದು ಮಾಮರನಂ ಮೀ ಳೆಯಂ ಫಲಸುಮಂ ಖರ್ಜೂರ ವರ ಕೂಗಿ ತರುಮಮ್ ವನಸ್ಪತಿಯ ನತ್ಯಾನಂದ ದಿಂದ ದಿಟ್ಟತಂ ಭರೆಮೆಚ್ಚುತ್ತಿರಿ""8 ಹೀಗೆ ಧರ್ಮಜ್ಞರು ಮೆಚ್ಚಿ ಹೊಗಳುವಂತೆ ಸಿರಿದೇವಿಯು ಕ್ಷಿತಿರುಹ ನೋಂಪಿಯನ್ನು ಕೈಕೊಂಡರೆ ಒಡೆಯ ಬೋಪ್ಪಣ್ಣ ನಾಯಕನು 36 ಬೀಡಿನ ಗಾವುಂಡರಿಗೆ ಶೆಟ್ಟಿ ಗುಪ್ತರಿಗೆ ವೀರ ಒಣಿಕರಿಗೆ ಸುಂಕಿಗರಿಗೆ ಸೇರಿಸಿ ಧರ್ಮ ಸಂತೆಯನ್ನು ನಡೆಸುತ್ತಾನೆ ತನ್ನ ಪತ್ನಿ ಸಿರಿದೇವಿ ತಾನು ಬೆಳೆಸಿದ ಉದ್ಯಾನವನವನ್ನು ಹಾಗೂ ಒಡೆಯ ಮಾಯಿ ದೇವನಿಗೆ ಅರ್ಪಿಸುತ್ತಾನೆ